ಸಿ.ಸಿ. ನಂ. 506/22

ಡಿ.ಡಬ್ಲ್ಯು.1

(ಇಂದು ದಿನಾಂಕ 27-01-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಫಿರ್ಯಾದಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ**

ಕರೋನಾ ರೋಗಿಗೆ ಬಿಡುಗಡೆ ಮಾಡಲು ಹೋಗಿದ್ದೆ ಎಂದು ಹೇಳಿದ್ದು ಅವರು ಯಾರು ಎಂದು ಅವರ ಹೆಸರು ಗೊತ್ತಿಲ್ಲ. ಅವರ ಮಗಳು ಫೋನ್ ಮಾಡಿ ಹೇಳಿದ್ದರು. ಅವರ ಮಗಳ ಹೆಸರು ಶೀಲಾ. ಅವರು ಮುಂಬೈಯಲ್ಲಿ ಇರುತ್ತಾರೆ. ಅವರು ಫೋನ್ ಮಾಡಿ ಹೇಳಿದ್ದರು. ಅವರ ಫೋನ್ ನಂಬರ್ ಕೊಡಬಹುದು. ಶೀಲಾ ಎನ್ನುವವರ ತಾಯಿ ಆಸ್ಪತ್ರೆಯಲ್ಲಿ ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ. ಕರೋನಾ ರೋಗಿಗೆ ಬಿಡುಗಡೆ ಮಾಡಲು ಹೋದ ದಿನಾಂಕ ನೆನಪಿಲ್ಲ. ಆದರೆ ಕಾಲಾವಕಾಶ ಕೊಟ್ಟರೆ ಹೇಳಬಹುದು. ಗಜಾನನ ನಾಯ್ಕ ಇವರಿಗೆ ಫೋನ್ ಮಾಡಿ ಹೇಳಿದ ತಾರೀಖು ನೆನಪಿಲ್ಲ. ವಿಡಿಯೋ ಶೂಟಿಂಗನ್ನು ಸೆಕ್ಯುರಿಟಿ ಗಾರ್ಡ ಒಬ್ಬರು ಮಾಡಿದ್ದರು. ಅವರ ಹೆಸರು 'ಸ' ದಿಂದ ಪ್ರಾರಂಭವಾಗುತ್ತದೆ. ಫಿರ್ಯಾದಿ ವಿರುದ್ಧ ನಾನು 50 ಕ್ಕಿಂತ ಹೆಚ್ಚಿನ ಅರ್ಜಿ ಸಲ್ಲಿಸಿದ್ದೇನೆ ಎಂದು ಹೇಳಿದ್ದು ಅದರ ಪ್ರತಿಗಳು ನನ್ನ ಬಳಿ ಇವೆ. RTI ನಲ್ಲಿ ಅದರ ಅರ್ಜಿಯನ್ನು ನನಗೆ ಕೊಡದೇ ಇದ್ದ ಕಾರಣ ನಾನು ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತೇನೆ. ಅದರ ಪ್ರತಿ ನನ್ನ ಬಳಿ ಇದೆ. ಅದನ್ನು ನಾನು ವಕೀಲರಿಗೆ ಕೊಟ್ಟಿದ್ದು ಇಲ್ಲಿ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಬಳಿ ಮಾತನಾಡುತ್ತಿದ್ದ ವೈದ್ಯರಿಗೆ ಫಿರ್ಯಾದಿ ಬೈದಿದ್ದಾರೆ ಎಂದು ಹೇಳಿದ್ದು ಸುಮಾರು 4-5 ವೈದ್ಯರಿಗೆ ಬೈದಿದ್ದಾರೆ. ಅದರಲ್ಲಿ ಒಬ್ಬರು ಡಾ. ವೆಂಕಟೇಶ ದೊಡ್ಡಮನಿ ಉಳಿದವರ ಹೆಸರು ನೆನಪಿಲ್ಲ. ಡಾ. ದೊಡ್ಡಮನಿ ವರ್ಗಾವಣೆಯಾದ ದಿನಾಂಕ ನನಗೆ ನೆನಪಿಲ್ಲ. ನಾನು ವಿಡಿಯೋ ಅಪಲೋಡ ಮಾಡುವ ಮೊದಲೇ ಡಾ. ದೊಡ್ಡಮನಿಯವರು ವರ್ಗಾವಣೆಯಾಗಿ ಹೋಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ವಿಡಿಯೋ ಅಪಲೋಡ ಮಾಡುವ ಸಂದರ್ಭದಲ್ಲಿ ಡಾ. ಗಜಾನನ ನಾಯಕ್ ಎನ್ನುವವರು ಡೀನಾಗಿ ಕೆಲಸ ಮಾಡುತ್ತಿದ್ದರು. ಡಾ. ದೊಡ್ಡಮನಿಯವರು ಹಿಂದೆ ಡೀನಾಗಿ ಕೆಲಸ ಮಾಡಿದ್ದರು ಎಂದರೆ ಸರಿ. ಯಾವ ಯಾವ ವೈದ್ಯರಿಗೆ ಬೈದಿದ್ದಾರೆ ಅವರ ಸಾಕ್ಷಿ ಮಾಡಬಹುದು. ದಿನಾಂಕ 01-12-2023 ರಂದು ಈ

ಪ್ರಕರಣದ 2 ಮತ್ತು 3 ನೇ ಆರೋಪಿತರು ಮತ್ತು ಧನಲಕ್ಷ್ಮೀ ಸೆಲ್ವರಾಜ್ ದೇವರ್ ಎನ್ನುವವರು ಉಸ್ತುವಾರಿ ಸಚಿವರಾದ ಮಂಕಾಳ್ ವೈದ್ಯ ಇವರಿಗೆ ಒಂದು ದೂರನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. 2 ಮತ್ತು 3 ನೇ ಆರೋಪಿತರು ಯಾವ ಹೊರಗುತ್ತಿಗೆದಾರ ಸಂಸ್ಥೆಯಡಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಮಾಹಿತಿ ಕೊಟ್ಟಿಲ್ಲ. 2 ಮತ್ತು 3 ನೇ ಆರೋಪಿತರನ್ನು ನೇರವಾಗಿ ಆಸ್ಪತ್ರೆಯವರು ಅಥವಾ ವೈದ್ಯಕೀಯ ಕಾಲೇಜಿನಲ್ಲಿ ನೇಮಕ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. 313 ಸ್ಟೇಟಮೆಂಟ್ ಸಮಯದಲ್ಲಿ 2 ಮತ್ತು 3 ನೇ ಆರೋಪಿತರು ಅವರ ಲಿಖಿತ ಹೇಳಿಕೆ ಕೊಟ್ಟಿದ್ದಾರೆ ಎಂದರೆ ಸರಿ. ಯೂ–ಟ್ಯೂಬ್‌ನಲ್ಲಿ ಅಪಲೋಡ ಮಾಡಿ ಎಂದು ನನಗೆ 2 ಮತ್ತು 3 ನೇ ಆರೋಪಿತರು ಹೇಳಿರುವುದಿಲ್ಲ. 2 ಮತ್ತು 3 ನೇ ಆರೋಪಿತರು ಯೂ–ಟ್ಯೂಬ್‌ನಲ್ಲಿ ಅಪಲೋಡ ಮಾಡಿದ ವಿಷಯ ನಮಗೆ ಗೊತ್ತಿರಲಿಲ್ಲ ಎಂದು ಹೇಳಿರುತ್ತಾರೆ ಎಂದರೆ ಇರಬಹುದು. ನಾನು ಯೂ–ಟ್ಯೂಬ್‌ನಲ್ಲಿ ವಿಡಿಯೋವನ್ನು ಅಪಲೋಡ ಮಾಡುವ ಮೊದಲು 2 ಮತ್ತು 3 ನೇ ಆರೋಪಿತರ ಒಪ್ಪಿಗೆಯನ್ನು ಪಡೆದುಕೊಂಡಿರುತ್ತೇನೆ.

ಕಾರವಾರ ಶಹರ ಪೊಲೀಸ್ ಠಾಣೆಯಲ್ಲಿ ಪೊಲೀಸರು ನನಗೆ ರೌಡಿ ಶೀಟರ್ ಎಂದು ಘೋಷಣೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಫಿರ್ಯಾದಿಯವರು ಪೊಲೀಸರಿಗೆ ಅರ್ಜಿಯನ್ನು ನೀಡಿ ನಾನು ರೌಡಿ ಶೀಟರ್ ಇದ್ದಾರೋ ಇಲ್ಲವೋ ಎನ್ನುವ ಬಗ್ಗೆ ಮಾಹಿತಿ ಕೇಳಿದ್ದರು ಎಂದರೆ ಸರಿ. ಯಾವುದೇ ವೈಯಕ್ತಿಕ ಮಾಹಿತಿಯನ್ನು ಕೊಡಬಾರದು ಎಂದು ನಾನು ಹೇಳಿರುತ್ತೇನೆ. ನಾನು ರೌಡಿ ಶೀಟರ್ ಇದ್ದೇನೋ ಇಲ್ಲವೋ ಎನ್ನುವ ಬಗ್ಗೆ ದಾಖಲಾತಿ ತರಿಸುವುದರಲ್ಲಿ ತೊಂದರೆ ಇಲ್ಲ. ನಾನು ಮಾಹಿತಿ ಕೊಡುವುದು ಬೇಡ ಎಂದು ಹೇಳಿದ ನಂತರ ಫಿರ್ಯಾದಿಗೆ ಈಗ ತೋರಿಸಿದಂತೆ ಪೊಲೀಸರು ಹಿಂಬರಹ ನೀಡಿದ್ದಾರೆ ಎಂದರೆ ಸರಿ. ಸದರಿ ದಾಖಲಾತಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿ.ಪಿ.12 ಎಂದು ಗುರುತಿಸಲಾಯಿತು. ಕಾರವಾರ ಶಹರ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ಈಗ ತೋರಿಸಿದಂತೆ ಫಿರ್ಯಾದಿ ದಾಖಲಾಗಿದ್ದು ಅದರಲ್ಲಿ 581/21 ಪ್ರ.ವ. ವರದಿ ದಾಖಲಾಗಿದೆ ಎಂದರೆ ಸರಿ. ಆದರೆ ಅದು ಸುಳ್ಳು ದೂರು ಆಗಿರುತ್ತದೆ. ಸದರಿ ದೂರು ಮತ್ತು

ಸಿ.ಸಿ. ನಂ. 506/22

ಡಿ.ಡಬ್ಲ್ಯು.1

ಪ್ರ.ವ. ವರದಿಯ ದೃಢೀಕೃತ ನಕಲುಗಳನ್ನು ನಿ.ಪಿ.13 ಮತ್ತು 14 ಎಂದು ಗುರುತಿಸಲಾಯಿತು. ಸುರೇಶ ನಾಯ್ಕ ಎನ್ನುವವರು ನನ್ನ ವಿರುದ್ಧ ಒಂದು ದೂರು ದಾಖಲಿಸಿದ್ದು, ಅದರ ಮೇಲೆ ಕ್ರೈಂ. ನಂ. 89/16 ಪ್ರ.ವ. ವರದಿ ದಾಖಲಾಗಿದ್ದು, ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಆದರೆ ಅದು ಸುಳ್ಳು ದೂರಾಗಿರುತ್ತದೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.15 ರಿಂದ 17 ಎಂದು ಗುರುತಿಸಲಾಯಿತು. ಪಿ.ಎಸ್.ಐ.–ನಿಶ್ಚಲ್‌ಕುಮಾರ್ ಎನ್ನುವವರು ನನ್ನ ವಿರುದ್ಧ ಒಂದು ದೂರು ದಾಖಲಿಸಿದ್ದು, ಅದರ ಮೇಲೆ ಕ್ರೈಂ. ನಂ. 22/12 ಪ್ರ.ವ. ವರದಿ ದಾಖಲಾಗಿದ್ದು, ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಆದರೆ ಅದು ಸುಳ್ಳು ದೂರಾಗಿರುತ್ತದೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.18 ರಿಂದ 20 ಎಂದು ಗುರುತಿಸಲಾಯಿತು. ಸಿಸ್ಟರ್ ಕ್ರಿಸ್ಟಿನಾ ಜೊಸೇಫ್ ಎನ್ನುವವರು ನನ್ನ ವಿರುದ್ಧ ಒಂದು ದೂರು ದಾಖಲಿಸಿದ್ದು, ಅದರ ಮೇಲೆ ಕ್ರೈಂ. ನಂ. 1424/23 ಪ್ರ.ವ. ವರದಿ ದಾಖಲಾಗಿರುತ್ತದೆ ಎಂದರೆ ಸರಿ. ಆದರೆ ಅದು ಸುಳ್ಳು ದೂರಾಗಿರುತ್ತದೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.21 ಮತ್ತು 22 ಎಂದು ಗುರುತಿಸಲಾಯಿತು. ನನ್ನ ವಿರುದ್ಧ ಸುಮಾರು 11 ದೂರುಗಳು ದಾಖಲಾಗಿದ್ದು ಅವುಗಳು ನಿಖಾಲೆಯಾಗಿರುತ್ತವೆ. ಫಿರ್ಯಾದಿಗೆ ವರ್ಗಾವಣೆ ಮಾಡಲು ನಾನು ಶಾಸಕರಿಗೆ ದೂರು ಕೊಟ್ಟಿದ್ದೆ. ಅದು ದಿನಾಂಕ 23-06-2023 ರಂದು ಕರಾವಳಿ ಮುಂಜಾವು ಪತ್ರಿಕೆಯಲ್ಲಿ ಪ್ರಕಟಣೆಯಾಗಿದೆ ಎಂದರೆ ಸರಿ. ಸದರಿ ಪತ್ರಿಕೆಯನ್ನು ನಿ.ಪಿ.23 ಎಂದು, ಪತ್ರಿಕೆಯ ಭಾಗವನ್ನು ನಿ.ಪಿ.23(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಫಿರ್ಯಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ

ಸಿ.ಸಿ. ನಂ. 506/22

ಡಿ.ಡಬ್ಲ್ಯು.1